**ಪಿ.ಡಬ್ಲೂ ಃ 1**

**ಸಾಕ್ಷಿಗೆ ದಿನಾಂಕಃ 30.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ವಕೀಲರ ಮೂಲಕ ಃ**

**35** ಮೆಡಿಕಲ್ ಬಿಲ್ಲುಗಳನ್ನು ಒಟ್ಟಾರೆಯಾಗಿ ನಿಪಿ-**10** ಎಂದು, **14** ವೈದ್ಯಕೀಯ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ-**11** ಎಂದು, **3** ಕ್ಷ - ಕಿರಣಗಳನ್ನು ಒಟ್ಟಾಗಿ ನಿಪಿ-**12** ಎಂದು ಗುರುತಿಸಿಕೊಳ್ಳಲಾಯಿತು.

**ಪಾಟೀ ಸವಾಲು ಎದುರುದಾರರರ ಪರ ಶ್ರೀ ಜಿ ವಿ.ಎನ್ ಎಂ ವಕೀಲರಿಂದ**

ನನಗೆ **48** ವರುಷ ವಯಸ್ಸಾಗಿತ್ತು ಎಂದು ತೋರಿಸಲು ಅದಾರ ಕಾರ್ಡು ಹಾಜರುಪಡಿಸಿರುತ್ತೇನೆ. ನಾನು ಸಾಮಿಲ್ ಮಾಲೀಕ ಅಗಿರುತ್ತೇನೆ. ಆ ಸಂಬಂದವಾಗಿ ನಾನು ಪರವಾನಿಗೆ ಹಾಜರುಪಡಿಸಿರುವುದಿಲ್ಲ. ರಾತ್ರಿ **8.00** ಗಂಟೆ ಸಮಯದಲ್ಲಿ ನಾನು ವಾಕ್ ಮಾಡುತ್ತಿದ್ದಾಗ ಅಪಘಾತವಾಗಿರುತ್ತದೆ. ಸ್ಲೆಂಡರ್ ಪ್ಲಸ್ ಬೈಕು ಸಂತೇಮಾಳದ ಕಡೆಯಿಂದ ಬಂದು ಅಪಘಾತ ಪಡಿಸಿರುತ್ತದೆ. ನಾನು ಕಾವೇರಿ ಮ್ಲಟಿಪೆಸ್ಲಲಾಟಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು **4** ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ಔಷದೋಪಚಾರಕ್ಕೆ **3** ಲಕ್ಷ ರೂಪಾಯಿ ಖರ್ಚು ಅಗಿರುತ್ತದೆ ಎಂದು ಹೇಳುವ ಸಂಬಂದವಾಗಿ ದಾಖಲೆ ಹಾಜರುಪಡಿಸಿರುತ್ತೇನೆ. ಇತರೆ ಖರ್ಚು **50** ಸಾವಿರ ರೂಪಾಯಿ ಅಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನನ್ನು ನೋಡಿಕೊಳ್ಳಲು ನೇಮಕ ಮಾಡಿಕೊಂಡಿದ್ದ ವ್ಯಕ್ತಿಗೆ **500** ರೂನ್ನು ಪ್ರತಿದಿನ ಕೊಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿ ಬಾರಿಗೆ ಅಸ್ಪತ್ರೆಗೆ ಹೋಗಲು ಕಾರಿಗೆ **2500-00** ಬಾಡಿಗೆ ಕೊಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭವಿಷ್ಯದ ಚಿಕಿತ್ಸೆಗೆ **2** ಲಕ್ಷ ರೂಪಾಯಿ ಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಂಗಳಿಗೆ **60** ಸಾವಿರ ಸಂಪಾದನೆ ಮಾಡುತ್ತಿದ್ದ ಬಗ್ಗೆ ಅದಾಯ ತೆರಿಗೆ ಪಾವತಿ ಮಾಡುತ್ತೇನೆ ಆ ಬಗ್ಗೆ ದಾಖಲೆ ಇದೆ, ಮುಂದೆ ಹಾಜರುಪಡಿಸುತ್ತೇನೆ. ಅಸ್ಪತ್ರೆಗೆ **3** ಲಕ್ಷ ರೂಪಾಯಿ ಖರ್ಚು ಅಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುಣ ಮುಖ ಅಗಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿ

ನ ಪರಿಹಾರ ಬರಲಿ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.